## ಪಾರಿಭಾಷಿಕ ಪದಗಳ ಸೊಗಸು

ಭಾಷೆಯ ಬೆಳವಣಿಗೆಗೆ ಪಾರಿಭಾಷಿಕ ಪದಗಳಿರಬೇಕು. ಇಂದು ಬ್ಯಾಂಕಿಂಗ್‌ನಲ್ಲಿ ಬಳಸುತ್ತಿರುವ ಅನೇಕ ಪದಗಳು ಬ್ಯಾಂಕಿಂಗ್ ಕಮ್ಮಟಗಳಲ್ಲಿ ಚರ್ಚೆಯಾದವು. ಬಿರುಸು ಚರ್ಚೆ, ವಾಗ್ವಾದಗಳಾದ ಮೇಲೆ ಒಮ್ಮತಕ್ಕೆ ಬರುವ ಸೂಕ್ತ ಪದಗಳು ಆಯ್ಕೆಯಾಗಿ ನಿಘಂಟು ಸೇರುತ್ತಿದ್ದವು. ಒಂದೆರಡು ಉದಾಹರಣೆ:

ಸಾಲದಲ್ಲಿ ಅನೇಕ ರೀತಿಗಳು ಇವೆಯಷ್ಟೇ. ಅವುಗಳ ಕನ್ನಡೀಕರಣ ನೋಡಿ: Loan = ಸಾಲ, Credit = ಉದರಿ, Cash Credit = ನಗದು ಉದರಿ, Advance = ಮುಂಗಡ, Over Draft = ಮೀರೆಳತ.

Passing official ಎಂಬ ಪದಕ್ಕೆ 'ಪಾರಣಾಧಿಕಾರಿ' ಎಂಬ ಪದ ವಾಗ್ಯುದ್ಧಗಳ ನಡುವೆ ಸೃಷ್ಟಿಯಾಯಿತು. ಪದ ಚೆನ್ನಾಗಿದ್ದರೆ ಮಾತ್ರ ಜನ ಸ್ವೀಕರಿಸುತ್ತಾರೆ. ಪೊಲೀಸ್‌ಗೆ 'ಆರಕ್ಷಕ' ಎಂಬ ಪಾರಿಭಾಷಿಕ ಪದ ಬಂದಾಗ ಜನ ಒಪ್ಪಲಿಲ್ಲ. ಜೆರಾಕ್ಸ್‌ಗೆ 'ನೆರಳಚ್ಚು' ಪದ ಬಂದಾಗ ಯಾರೂ ಬಳಸಲಿಲ್ಲ. ಆದರೆ ಬಿ.ಇ.ಪಿ. Break Even Point = 'ಸಮಾದಾಯ ವೆಚ್ಚ ಸ್ಥಿತಿ ಬಿಂದು' ಪದ ಜಾಲ್ತಿಗೆ ಬಂತು. M.I.C.R. ಚೆಕ್ಕುಗಳು ಬಂದವು. Magnetic Ink Character Recognition ಪದಕ್ಕೆ 'ಕಾಂತೀಯ ಮಸಿಲಿಪಿ ಗ್ರಹಣ' ಎಂಬುದು ಕಮ್ಮಟದಲ್ಲಿ ಮೂಡಿ ಬಂದ ಪದ. M.I.C.R. ಸಂಕ್ಷಿಪ್ತ ರೂಪಕ್ಕೆ 'ಕಾಮಲಿಗ್ರ' ಎನ್ನಬೇಕು. ಈ ಪದ ಹಿತವಾಗಿಲ್ಲವಾದ್ದರಿಂದ ಅದನ್ನು 'ಕಾಲಿಗ್ರ' ಎಂದು ಮೊಟಕುಗೊಳಿಸಲಾಯಿತು.

ಬ್ಯಾಂಕಿಂಗ್‌ಗೆ ಸಂಬಂಧಿಸಿದ ಅನೇಕ ಕ್ಲಿಷ್ಟ ಪದಗಳನ್ನು ಕನ್ನಡಕ್ಕೆ ತರಲು ಎಚ್ಚೆಸ್ಕೆ ಅವರು ನಡೆಸಿದ ಕಮ್ಮಟಗಳು ನೆರವಾಗಿವೆ. 'ಪಾರಿಭಾಷಿಕ ಪದ ಎಂಬುದು ಬಂದೂಕಿನ ಗುಂಡು ಇದ್ದ ಹಾಗೆ. ಅದನ್ನು ಸರಿಯಾದ ಸ್ಥಳದಲ್ಲಿಟ್ಟು ಸರಿಯಾಗಿ ಟ್ರಿಗರ್ ಒತ್ತಿದರೆ ಮಾತ್ರ ಗುರಿ ಸೇರುತ್ತದೆ' ಎನ್ನುತ್ತಿದ್ದರು ಎಚ್ಚೆಸ್ಕೆ.

ಬದುಕಿದ್ದು 89 ವರ್ಷ (29.8.2008). ಬಾಲ್ಯದಲ್ಲಿ ಬಡತನ. ಪತ್ರಿಕೆಯ ಏಜೆಂಟ್ ಕೆಲಸ. ಹೈಸ್ಕೂಲು ಮುಗಿಸಿ ಕಾಲೇಜು ಸೇರಿ ಕಾಮರ್ಸ್ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣ. ಕನ್ನಡ 'ಜಾಣ' ಪರೀಕ್ಷೆಯಲ್ಲಿ ಚಿನ್ನದ ಪದಕ. ಬಿ.ಎಂ.ಶ್ರೀ. ಅವರಿಂದ ಕನ್ನಡದ ದೀಕ್ಷೆ ಪಡೆದ ಎಚ್ಚೆಸ್ಕೆಗೆ ಚಿನ್ನದ ಬಗ್ಗೆ ನಿರಾಸಕ್ತಿ. ಆದರೂ 'ಬನಾರಸ್ ವಿಶ್ವವಿದ್ಯಾನಿಲಯ' ಅವರಿಗೆ ಎಂ.ಎ. ಪದವಿಯನ್ನು ಚಿನ್ನದ ಪದಕದೊಂದಿಗೆ ನೀಡಿದ್ದು 1951ರಲ್ಲಿ.

ಮೈಸೂರಿನಲ್ಲಿ ವಾಸ. ಸರಸ್ವತಿಪುರಂನಿಂದ ಸಯ್ಯಾಜಿರಾವ್ ರಸ್ತೆಯ ಕಾಲೇಜಿಗೆ ಸಿಟಿ ಬಸ್ಸಲ್ಲಿ ನಿತ್ಯ ಸ್ಟ್ಯಾಂಡಿಂಗ್ ಸೀಟು. ಬನುಮಯ್ಯ ಕಾಲೇಜಿನ ವಿದ್ಯಾರ್ಥಿಗಳಿಗೆ ಎಕನಾಮಿಕ್ಸ್ ಹಾಗೂ ಬ್ಯಾಂಕಿಂಗ್ ಬೋಧನೆ. ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ. ಸಾಹಿತ್ಯಿಕ ಸಮಾರಂಭಗಳಿಗೆ ಶಿವರಾಮ ಕಾರಂತ, ವಿ.ಸೀ., ರಾಜರತ್ನಂ, ಗೋಕಾಕ್ ಮುಂತಾದವರನ್ನು ಅತಿಥಿಗಳನ್ನಾಗಿ ಕರೆಸಿ ಮಕ್ಕಳಿಗೆ ಪರಿಚಯಿಸುವ ಹುಮ್ಮಸ್ಸು. ಆರ್ಥಿಕ ತಜ್ಞರಾಗಿ, ಪತ್ರಿಕೆಯ ಅಂಕಣಕಾರರಾಗಿ, ವರದಿಗಾರರಾಗಿ, ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಕವಿ, ಕಾದಂಬರಿಕಾರರಾಗಿ ವಿವಿಧ ರಂಗಗಳಲ್ಲಿ ಸೇವೆ. 'ಕನ್ನಡ ವಿಶ್ವಕೋಶ'ದ ಮಾನವೀಯ ವಿಭಾಗದ ಸಂಪಾದಕರಾಗಿ ಅವಿರತ ದುಡಿಮೆ. 'ಸುಧಾ' ಪತ್ರಿಕೆಗೆ ಮೊದಲ ಸಂಚಿಕೆಯಿಂದ ಪ್ರಾರಂಭಿಸಿ ಮೂರು ದಶಕಗಳ ಕಾಲ 'ವಾರದಿಂದ ವಾರ'ಕ್ಕೆ ಲೇಖನಗಳ ರಚನೆ. 1971ರಿಂದ 'ಪ್ರಜಾವಾಣಿ'ಯಲ್ಲಿ ವಾರಕ್ಕೊಮ್ಮೆ 'ಆರ್ಥಿಕ ಚಿಂತನೆ' ಲೇಖನಮಾಲೆ.

### ಕಮ್ಮಟಗಳ ದಾಖಲೆ

'ಸಮನ್ವಯ ಸಮಿತಿ'ಯ ಬ್ಯಾಂಕಿಂಗ್ ಕಮ್ಮಟಗಳಿಗೆ ಕಾಯಂ ನಿರ್ದೇಶಕರು ಪ್ರೊ. ಎಚ್ಚೆಸ್ಕೆ. ಇಂಗ್ಲಿಷಿನಲ್ಲಿರುವ ಬ್ಯಾಂಕಿಂಗ್ ಪದಗಳನ್ನು ಆಮೂಲಾಗ್ರವಾಗಿ ಚರ್ಚಿಸಿ ಕಮ್ಮಟಿಗರು ಒಪ್ಪಿದ ಹೊಸ ಕನ್ನಡ ಪದಗಳನ್ನು ಟಂಕಿಸಿ ಬ್ಯಾಂಕಿನ ನಿಘಂಟಿಗೆ ಸೇರಿಸುತ್ತಿದ್ದರು. 1985ರಲ್ಲಿ ಕನ್ನಡದ 'ಬ್ಯಾಂಕಿಂಗ್ ನಿಘಂಟು' ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರಿಂದ ಬಿಡುಗಡೆ ಆಯಿತು. ಕನ್ನಡಕ್ಕಾಗಿ ಎಚ್ಚೆಸ್ಕೆ ಮಾಡುತ್ತಿರುವ ಸೇವೆಯನ್ನು ಮುಖ್ಯಮಂತ್ರಿಗಳು ಶ್ಲಾಘಿಸಿದ್ದರು. ಸನ್ಮಾನಿತರಾದ ಎಚ್ಚೆಸ್ಕೆಯವರು ಹೇಳಿದ ಮಾತಿದು. 'ನಮಗೆ ಸ್ವರ್ಗ ಸಿಗಬೇಕಾದ್ರೆ ನಾವೇ ಸಾಯ್ಬೇಕು, ಬೇರೆಯವರು ಸತ್ರೆ ನಮಗೆ ಸ್ವರ್ಗ ಸಿಗೊಲ್ಲ. ಕನ್ನಡದ ಕೆಲಸವೂ ಹಾಗೇ.'

### ಕವನ ಕಡ್ಡಾಯ

ಕರ್ನಾಟಕದ 25 ಜಿಲ್ಲೆಗಳಲ್ಲಿ ಬ್ಯಾಂಕಿಂಗ್ ಕಮ್ಮಟಗಳು ಎಚ್ಚೆಸ್ಕೆ ಮಾರ್ಗದರ್ಶನದಲ್ಲಿ ನಡೆದಿವೆ. ಇದಲ್ಲದೆ ಮಹಾರಾಷ್ಟ್ರದ ಸೋಲಾಪುರ, ಕೇರಳದ ಕಾಸರಗೋಡಿನಲ್ಲೂ ಕನ್ನಡದ ಬ್ಯಾಂಕಿಂಗ್ ಕಮ್ಮಟಗಳು ಜಯಭೇರಿ ಬಾರಿಸಿವೆ. ಕಮ್ಮಟಗಳಲ್ಲಿ ಸಂಜೆ ವೇಳೆ ಕವಿಗೋಷ್ಠಿಗಳು ನಡೆಯುತ್ತಿದ್ದವು. ಎಲ್ಲ ಕಮ್ಮಟಿಗರೂ ಕಡ್ಡಾಯವಾಗಿ ಸ್ವರಚಿತ ಕವನ ವಾಚಿಸಬೇಕಿತ್ತು. ಈ ಬಲವಂತ ಮಾಘಸ್ನಾನದಿಂದ ಅನೇಕ ಹೊಸ ಕವಿಗಳು ಬೆಳಕಿಗೆ ಬಂದಿದ್ದಾರೆ. 'ಬ್ಯಾಂಕಿಂಗ್ ಪ್ರಪಂಚ' ಎಂಬ ತ್ರೈಮಾಸಿಕದಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಬ್ಯಾಂಕಿಂಗ್ ಲೇಖನಗಳ ಕನ್ನಡಾನುವಾದವಿದೆ. ಇವು ಕಮ್ಮಟದ ಫಲಶ್ರುತಿ. ಪ್ರೊ.ಎಚ್ಚೆಸ್ಕೆ ಇದರ ಸಂಪಾದಕರು.



ಕಲೆ: ವಿನ್ಯಾಸ್

ಖ್ಯಾತ ಅಂಕಣಕಾರರಾಗಿ ಅಸಂಖ್ಯ ಲೇಖನಗಳನ್ನ ಬರೆದ ಅವರು ಅಂಕಣ ಬರಹಗಳಿಗೆ ಹೆಚ್ಚು ಆಯಸ್ಸಿಲ್ಲ ಎಂದು ತಮ್ಮದೇ ಪದ್ಯವೊಂದರಲ್ಲಿ ಹೇಳಿದ್ದಾರೆ:

### ನಾನೊಬ್ಬ ಅಂಕಣಕಾರ

ಹುಟ್ಟುತ್ತಲೇ ಸಾಯುವಂಥ ಲೇಖನಗಳ ಬರಹಗಾರ
ನನಗಿಲ್ಲವೇ ಇಲ್ಲವಂತೆ ಸಾಹಿತ್ಯದ ಅಧಿಕಾರ
ನಿಜ ಸ್ವಾಮಿ, ನನಗಿಲ್ಲ ಖಂಡಿತಾ ಆ ಬಡಿವಾರ
ಎದೆತುಂಬಿ ತಂದಿರುವ ತುಂಬಿಹೂಗಳ ಹಾರ

ಎಚ್ಚೆಸ್ಕೆ ನಗುಮುಖದ ಸರಳ ವ್ಯಕ್ತಿ. ಯಾವುದೇ ಸಂದರ್ಭಕ್ಕೆ ಹೊಂದಿಕೊಳ್ಳುವ ಜಾಯಮಾನ. ಸಂಕೋಚದ ಮುದ್ದೆ. ಎಷ್ಟೋ ಮಂದಿಗೆ ಅವರು ಬಿಡಿಸಲಾಗದ ಒಗಟು. ಎದುರಾದ ಎಲ್ಲ ಕಷ್ಟಗಳನ್ನು ನಗುತ್ತಾ ಎದುರಿಸಿದವರು. ನಿವೃತ್ತಿಯ ನಂತರ ಅವರ ಜೀವಕ್ಕೆ ಆಧಾರವಾಗಿದ್ದು ಬರವಣಿಗೆ ಮಾತ್ರ.

ಎಚ್ಚೆಸ್ಕೆ ಕತೆ, ಕಾದಂಬರಿ, ವಿಮರ್ಶೆ, ಪ್ರಬಂಧಗಳನ್ನೂ ಬರೆದಿದ್ದಾರೆ. ಲಾಲ್ ಬಹಾದೂರ್ ಶಾಸ್ತ್ರಿ, ಜಯಪ್ರಕಾಶ್ ನಾರಾಯಣ್, ಡಾ. ಬಿ.ಆರ್. ಅಂಬೇಡ್ಕರ್, ಬಿ.ಆರ್. ಪಂತಲು ಮೊದಲಾದವರ ಜೀವನ ಚರಿತ್ರೆಗಳು ಒಳಗೊಂಡಂತೆ ಅನೇಕ ಮಹನೀಯರ ಬಗ್ಗೆ ಪುಸ್ತಕಗಳನ್ನು ರಚಿಸಿದ್ದಾರೆ. ಇವರ 'ವ್ಯಾವಹಾರಿಕ ಕನ್ನಡ' ಬಿ.ಕಾಂ.ಗೆ ಪಠ್ಯವಾಗಿತ್ತು.

ಎಚ್ಚೆಸ್ಕೆಯವರ ಜನ್ಮಶತಾಬ್ದಿಯ ವರ್ಷವಿದು. 'ಭಾರತೀಯ ಸ್ಟೇಟ್ ಬ್ಯಾಂಕ್ ಸಮನ್ವಯ ಸಮಿತಿ'ಯವರು ಒಂದು ವಾರ ಕಾಲ ಎಚ್ಚೆಸ್ಕೆ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅವರು ಹುಟ್ಟಿದ ದಿನವಾದ ಆಗಸ್ಟ್ 26ರಂದು ಬ್ಯಾಂಕ್ ಸಾಹಿತಿಗಳು ಬರೆದ 15 ಪುಸ್ತಕಗಳು ಬಿಡುಗಡೆಯಾಗಲಿವೆ. ಎಚ್ಚೆಸ್ಕೆಯವರ ನೆನಪೇ ಬ್ಯಾಂಕ್ ಬರಹಗಾರರಿಗೆ ಸ್ಫೂರ್ತಿಯ ಬ್ಯಾಂಕ್ ಇದ್ದಂತೆ!